# 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಶಿರಸಿ

## ಪೀಠಾಸೀನ ಯಲ್ಲಾಪುರ

**ಎಸ್.ಸಿ.ನಂ. 5020/2024**

ಪಿ.ಡಬ್ಲು.1

**ಸಿ.ಡಬ್ಲು.1**

ಸಾಕ್ಷಿದಾರರ ಹೆಸರು : ಮಲ್ಲಿಕಾರ್ಜುನ

ತಂದೆಯ ಹೆಸರು : ವಿಷ್ಣು ಅಷ್ಟೇಕರ

ವಯಸ್ಸು : **67** ವರ್ಷ

ಉದ್ಯೋಗ : ವಕೀಲ

ವಾಸ : ಹಳಿಯಾಳ

ಇಂದು ದಿನಾಂಕ **20-02-2026** ರಂದು ಸಾಕ್ಷಿದಾರರನ್ನು ಹಾಜರು ಪಡಿಸಿಕೊಂಡು ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ಚಾಸಾ-6 ನನ್ನ ಮಗ. ಚಾಸಾ-7 ರಿಂದ 10 ಪರಿಚಯ ಇರುತ್ತಾರೆ. ಆರೋಪಿಯ ಪರಿಚಯ ಇರುತ್ತದೆ. ದಿಃ 13.07.2023 ರಂದು ನಾನು 11.00 ಗಂಟೆಯಿಂದ 2.00 ಗಂಟೆವರೆಗೆ ನ್ಯಾಯಾಲಯದಲ್ಲಿದ್ದೆ ಆ ನಂತರ ಮನೆಗೆ ಬಂದೆ. ನಾನು ಕೈಕಾಲು ಮುಖ ತೊಳೆದುಕೊಳ್ಳುತ್ತಿರುವಾಗ ನಮ್ಮ ಮನೆಯ ಹೊರಗಿನ ಹಾಲ್ ನಿಂದ ಏ ಸೂಳೇ ಮಗನೇ ಚಿನಾಲಿ ಮಗನೇ ನಿನ್ನ ಅಪ್ಪ ಎಲ್ಲಿದ್ದಾನೆ ಎಂದು ನನ್ನ ಮಗನಿಗೆ ಕೇಳುತ್ತಿರುವ ಚೀರಾಟ ಕೇಳಿಸಿತು ಮತ್ತು ಆ ವ್ಯಕ್ತಿ ನನ್ನ ಮಗನಿಗೆ ಕೈಯಿಂದ ಬಡಿಯುತ್ತಿದ್ದ. ಯಾಕೆ ಹೀಗೆ ಮಾಡುತ್ತಿಯಾ ಎಂದು ನನ್ನ ಮಗನನ್ನು ಬಿಡಿಸಲು ಹೋದಾಗ ನನ್ನನ್ನು ಉದ್ದೇಶಿಸಿ ಏ ಚಿನಾಲಿ ಮಗನೇ ರಂಡೆ ಮಗನೇ ನಿನ್ನ ಕೊಲೆ ಮಾಡುತ್ತೇನೆ ನನ್ನ ಕೇಸಿನ file ಕೊಡು ಎಂದು ಹೇಳಿದಾಗ ನಿನ್ನ ಯಾವುದೇ file ನನ್ನ ಬಳಿ ಇಲ್ಲ ನೀನೆ ಕೇಸು ನಡೆಸುತ್ತಿ ಎಂದು ಹೇಳಿದಿಯಲ್ಲಾ ಎಂದು ಹೇಳಿದೆ. ಆಗ ಆತ ತನ್ನ ಕಿಸೆಯಲ್ಲಿದ್ದ ಚಾಕುವಿನಿಂದ ನನ್ನ ತಲೆ

ಕುತ್ತಿಗೆಯ ಹಿಂಭಾಗದಲ್ಲಿ ತಿವಿದ. ನನ್ನ ಎಡ ತಲೆಗೆ ಹೊಡೆಯಲು ಪ್ರಯತ್ನಿಸಿದಾಗ ನಾನು ತಪ್ಪಿಸಿದ್ದರಿಂದ ಆ ಚಾಕು ನನ್ನ ತಲೆ ಕುತ್ತಿಗೆಯ ಹಿಂಭಾಗದಲ್ಲಿ ಬಿದ್ದಿತು. ಸದರಿ ಚಾಕುವನ್ನು ಈಗ ನೋಡುತ್ತಿದ್ದು ಅದನ್ನು ಮು.ಮಾ. 1 ಎಂದು ಗುರುತಿಸಲಾಯಿತು. ಮು.ಮಾ. 1 ಇಟ್ಟಂತಹ ಪ್ಯಾಕೇಟ್ ನ ಮೇಲೆ ನನ್ನ ಸಹಿ ಇದ್ದು ಅದನ್ನು ಮು.ಮಾ.1(ಎ) ಎಂದು ಗುರುತಿಸಲಾಯಿತು. ಸದರಿ ಗಾಯದಿಂದ ರಕ್ತಸ್ರಾವವಾಗಿತ್ತು. ನಮ್ಮ ಮನೆಯ ಮುಂದೆ ಇದ್ದ ಚಾಸಾ–7 ಏನ್ರಿ ಏನ್ರಿ ಎಂದು ಕೇಳುತ್ತಾ ಬಂದಾಗ ನಿನ್ನನ್ನು ತಲವಾರ್ ನಿಂದ murder ಮಾಡುತ್ತೇನೆ ಎಂದು ಹೇಳಿ ಚಾಕುವನುನ ಅಲ್ಲಿಯೇ ಬಿಸಾಡಿ ಓಡಿ ಹೋದ. ಆಗ ಸಮಯ 2 ಗಂಟೆಯಾಗಿತ್ತು. ಆ ಕುರಿತು ನಾನು ದೂರನ್ನು ನೀಡಿದ್ದು ಅದನ್ನು ನಿ.ಪಿ. 1 ಹಾಗೂ ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ನಾನು ಪೊಲೀಸರಿಗೆ ಚಾಕುವನ್ನು ನೀಡಿದ್ದು ಘಟನೆ 13.07.2023 ರಂದು ಆಗಿರುತ್ತದೆ. ಘಟನಾ ಸ್ಥಳಕ್ಕೆ ಪೊಲೀಸರು ಮಾರನೇ ದಿನ ಬಂದು ಚಾಸಾ–2 ಮತ್ತು 3 ರವರ ಸಮಕ್ಷಮ ಪಂಚನಾಮೆ ಮಾಡಿದ್ದು ಆ ಸ್ಥಳವನು ನಾನೇ ತೋರಿಸಿದ್ದು ಪಂಚನಾಮೆಯನ್ನು ನಿ.ಪಿ. 2 ಹಾಗೂ ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಆ ಸಂದರ್ಭದಲ್ಲಿ ಚಾಕುವನ್ನು ಹಾಜರುಪಡಿಸಿರುತ್ತೇನೆ. ಆ ಸಂದರ್ಭದಲ್ಲಿ ತೆಗೆದ ಭಾವಚಿತ್ರವನ್ನು ನಿ.ಪಿ. 3 ಎಂದು ಗುರುತಿಸಲಾಯಿತು. ಪಂಚನಾಮೆ ಕಾಲದಲ್ಲಿ ನಕ್ಷೆಯನ್ನು ತೆಗೆದಿದ್ದು ಅದನ್ನು ನಿ.ಪಿ. 4 ಹಾಗೂ ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ.4(ಎ) ಎಂದು ಗುರುತಿಸಲಾಯಿತು. ಚಾಕುವನ್ನು ಹಾಜರುಪಡಿಸುವ ಕಾಲಕ್ಕೆ ಪಂಚನಾಮೆ ಮಾಡಿದ್ದು ಅದನ್ನು ನಿ.ಪಿ. 5 ಹಾಗೂ ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ.5(ಎ) ಎಂದು ಗುರುತಿಸಲಾಯಿತು. ಆ ಸಂದರ್ಭದಲ್ಲಿ ತೆಗೆಯಲಾದ ಭಾವಚಿತ್ರವನ್ನು ನಿ.ಪಿ. 6 ಎಂದು ಗುರುತಿಸಲಾಯಿತು. ಆ ಸಂದರ್ಭದಲ್ಲಿ ಚಾಸಾ–4 ಮತ್ತು 5 ಹಾಜರಿದ್ದರು. ನನ್ನ ಮೇಲೆ ಹಲ್ಲೆ ಮಾಡಿದ ವ್ಯಕ್ತಿ ನ್ಯಾಯಾಲಯದ ಮುಂದಿರುವ ಆರೋಪಿ ಇರುತ್ತಾನೆ. ಆರೋಪಿ ನನ್ನನ್ನು ಕೊಲೆ ಮಾಡುವ ಉದ್ದೇಶದಿಂದ ನನ್ನ ಮೇಲೆ ಹಲ್ಲೆ ಮಾಡಿರುತ್ತಾನೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ.

**<u>ಪಾಟೀ ಸವಾಲುಃ  ಆರೋಪಿಯಿಂದಃ</u>**

ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾದಲ್ಲಿ ಸಾಕ್ಷಿ ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉ.ಕ., ಕಾರವಾರ ಶಿರಸಿ ಪೀಠ,
ಸಂಚಾರಿ ಪೀಠ  ಯಲ್ಲಾಪುರ.